# 8.2.4. ತರಗತಿ ವಿಶ್ಲೇಷಣಾ ದಾಖಲೆ

## ಸಾಮಾನ್ಯ ಮಾದರಿ ($F_1$)

ಅಧ್ಯಾಪಕನ ಹೆಸರು : :

ಸಂಸ್ಥೆ :

ವಿಷಯ :

ಯೂನಿಟ್ :

ದಿನಾಂಕ :

ಉದ್ದೇಶಗಳು :

**ತರಗತಿ ವಿಶ್ಲೇಷಣೆ**

| ವಲಯ | ಮೌಲ್ಯಮಾಪನ ಮಾಡಬೇಕಾದ ವಿಷಯಗಳು |
|---|---|
| 1. ಯೋಜನೆ | 1. ಪಾಠಭಾಗಕ್ಕೆ ಸಂಬಂಧಿಸಿ ನಡೆಸಿದ ಪೆಡಗೋಜಿಕ್ ವಿಶ್ಲೇಷಣೆ<br>2. ಟೀಚಿಂಗ್ ಮಾನ್ಯುವೆಲ್‌ನ ಯೋಜನೆ. |
| 2. ಕಲಿಕಾ ಚಟುವಟಿಕೆಗಳ ನಿರ್ವಹಣೆ | 1. ಕಲಿಕಾ ಚಟುವಟಿಕೆಗಳ ವಿಶೇಷತೆಗಳು.<br>• ಕಲಿಕಾ ಉದ್ದೇಶಗಳನ್ನು ಈಡೇರಿಸುವ ಸಾಧ್ಯತೆಗಳು.<br>• ಮಗುವಿನ ಸ್ವಭಾವ, ಕಲಿಕಾ ಪ್ರಕ್ರಿಯೆ ಇತ್ಯಾದಿಗಳ ಪರಿಗಣನೆ<br>• ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದು.<br>• ವಿಭಿನ್ನ ಕಲಿಕಾಮಟ್ಟದ ಮಕ್ಕಳ ಪರಿಗಣನೆ.<br>2. ವೈಯಕ್ತಿಕವಾಗಿ ಮತ್ತು ಗುಂಪಾಗಿ ಕಲಿಕಾ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡುವ ಅವಕಾಶ.<br>3. ಅಧ್ಯಾಪಕರ ಕ್ರೋಡೀಕರಣ<br>4. ಮಕ್ಕಳ ಸೃಜನಶೀಲತೆಗೆ ಮತ್ತು ದಾಖಲೀಕರಣಕ್ಕೆ ಅವಕಾಶ. |
| 3. ಕಲಿಕಾ ತಂತ್ರಗಳು ಮತ್ತು ಕಲಿಕೋಪಕರಣಗಳು | 1. ಕಲಿಕಾ ರೀತಿಗಳು ಮತ್ತು ತಂತ್ರಗಳನ್ನು ಯೋಗ್ಯವಾಗಿ ಅಳವಡಿಸಿಕೊಳ್ಳುವುದು.<br>2. ಕಲಿಕೋಪಕರಣಗಳನ್ನು ಬಳಸಿಕೊಳ್ಳುವುದು. (ಕರಿಹಲಗೆ ಸಹಿತ) |
| 4. ಮೌಲ್ಯನಿರ್ಣಯ | 1. ನಿರಂತರ ಮೌಲ್ಯಮಾಪನ ನಡೆಸುವುದಕ್ಕಿರುವ ಪ್ರಯತ್ನಗಳು.<br>2. ಮಕ್ಕಳ ಪ್ರತಿಕ್ರಿಯೆಯ ಆಧಾರದಲ್ಲಿ ಕಲಿಕಾ ಚಟುವಟಿಕೆಯಲ್ಲಿ ಮಾಡಿದ ಬದಲಾವಣೆಗಳು.<br>3. ಪರಸ್ಪರ ಮತ್ತು ಸ್ವಯಂ ಮೌಲ್ಯಮಾಪನಕ್ಕೆ ಅವಕಾಶವನ್ನು ನೀಡುವುದು. |
| 5. ತರಗತಿ ಕೋಣೆಯ ವಾತಾವರಣ | 1. ತರಗತಿ ಕೋಣೆಯ ಕ್ರಮೀಕರಣ.<br>2. ಶಿಶು ಸೌಹಾರ್ದಯುತವಾದ ತರಗತಿ ವಾತಾವರಣ. |

### 8.2.5 ವಿಶ್ಲೇಷಣಾ ತರಗತಿಗಳ ಮೌಲ್ಯನಿರ್ಣಯ

ವಿಶ್ಲೇಷಣಾ ತರಗತಿಯ ಮೌಲ್ಯನಿರ್ಣಯಕ್ಕೆ ಈ ಕೆಳಗಿನ ಸೂಚಕಗಳನ್ನು ಪರಿಗಣಿಸಬೇಕು.

1. ಟೀಚಿಂಗ್ ಮ್ಯಾನ್ವಲನ್ನು ಚಟುವಟಿಕಾಧಾರಿತವಾಗಿಯೂ ಶಿಶು ಸೌಹಾರ್ದಪರವಾಗಿಯೂ ರಚಿಸಲಾಗಿದೆ.
2. ಯೋಗ್ಯವಾದ ಟೂಲನ್ನು ಬಳಸಿಕೊಂಡು ವೈಜ್ಞಾನಿಕವಾಗಿ ಮೌಲ್ಯನಿರ್ಣಯವನ್ನು ಮಾಡಲಾಗಿದೆ.
3. ವಿಶ್ಲೇಷಣೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲಾಗಿದೆ.
4. ವಿಶ್ಲೇಷಣಾ ವರದಿ ಸ್ಪಷ್ಟ ಮತ್ತು ಸಮಗ್ರವಾಗಿದೆ.
5. ಹಿರಿಮೆಗಳನ್ನು ಬೆಂಬಲಿಸುವುದರ ಜತೆಗೆ ಕೊರತೆಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

## 8.3 ಇಂಟರ್ನ್‌ಶಿಪ್ ನಿರ್ವಹಿಸುವುದಕ್ಕಾಗಿ ಅಗತ್ಯವಾದ ತಯಾರಿಗಳನ್ನು ನಡೆಸುವುದು ಮತ್ತು ಶಾಲೆಗಳನ್ನು ಆಯ್ಕೆ ಮಾಡುವುದು.

D.Ed ಪಠ್ಯ ಪದ್ದತಿಯ ಅತಿ ಪ್ರಮುಖ ಘಟ್ಟವು ಇಂಟರ್ನ್‌ಶಿಪ್ ಆಗಿದೆ. ಇದನ್ನು ಸುಗಮವಾಗಿ ನಿರ್ವಹಿಸುವುದರಲ್ಲಿ ಮುಂಗಡ ತಯಾರಿಯು ಪ್ರಧಾನ ಪಾತ್ರವಹಿಸುವುದು. ಈ ಕೆಳಗೆ ನೀಡಿರುವ ಚಟುವಟಿಕೆಗಳನ್ನು ಮುಂಗಡ ತಯಾರಿಯ ಭಾಗವಾಗಿ ನಿರ್ವಹಿಸಬೇಕು.

### 8.3.1 : ಟೀಚಿಂಗ್ ಪ್ರಾಕ್ಟೀಸಿಗಾಗಿ ಶಾಲೆಗಳನ್ನು ಆಯ್ಕೆ ಮಾಡುವುದು.

ಟೀಚಿಂಗ್ ಪ್ರಾಕ್ಟೀಸಿಗಾಗಿ ಶಾಲೆಗಳನ್ನು ಆಯ್ಕೆ ಮಾಡುವಾಗ ಇನ್‌ಸ್ಟಿಟ್ಯೂಟ್ ಆಫ್ ಟೀಚರ್ ಎಜ್ಯುಕೇಶನ್ (ಐ.ಟಿ.ಇ) ಅತ್ಯಂತ ಸಮೀಪದ ಸರಕಾರಿ/ ಎಯ್ಡೆಡ್ ಶಾಲೆಗಳನ್ನು ಆಯ್ಕೆ ಮಾಡಬೇಕು. ಎರಡನೇ ಸೆಮಿಸ್ಟರ್‌ನಲ್ಲಿ ಎಲ್.ಪಿ. ವಿಭಾಗವನ್ನು ಕೇಂದ್ರೀಕರಿಸಿ, ಟೀಚಿಂಗ್ ಪ್ರಾಕ್ಟೀಸನ್ನು ಯೋಜಿಸಬೇಕು. ಅದಕ್ಕಾಗಿ ಐ.ಟಿ.ಇಯ ಆಸುಪಾಸಿನಲ್ಲಿರುವ ಎಲ್.ಪಿ. ತರಗತಿಗಳಿರುವ ಶಾಲೆಗಳನ್ನು ಆಯ್ಕೆ ಮಾಡಬೇಕು. 4 ನೇ ಸೆಮಿಸ್ಟರ್‌ನಲ್ಲಿ ಎಲ್ ಪಿ, ಯುಪಿ ಹಂತಗಳಲ್ಲಿ ಟೀಚಿಂಗ್ ಪ್ರಾಕ್ಟೀಸ್ ಇರುವುದು. ಅದಕ್ಕಾಗಿ ಈ ಹಂತದ ತರಗತಿಗಳಿರುವ ಶಾಲೆಗಳನ್ನು ಆಯ್ಕೆ ಮಾಡಬೇಕು. ಮಕ್ಕಳ ಸಂಖ್ಯೆ ಕಡಿಮೆಯಿರುವ ಶಾಲೆಗಳನ್ನು ಆಯ್ಕೆ ಮಾಡದಿರುವುದು ಉತ್ತಮ. ಗುಂಪು ಚಟುವಟಿಕೆಗಳನ್ನು ನೀಡುವುದಕ್ಕೂ ಮೆಂಟರ್ ಆಗಿ ಕಾರ್ಯನಿರ್ವಹಿಸುವ ಅಧ್ಯಾಪಕರು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗದಿರಲು ಇದು ಕಾರಣವಾದೀತು. ಕೇರಳ ಶಿಕ್ಷಣ ಇಲಾಖೆಯ ಪಠ್ಯಕ್ರಮವನ್ನು ಅನುಸರಿಸುವ ಶಾಲೆಗಳನ್ನು ಮಾತ್ರ ಆಯ್ಕೆ ಮಾಡಬಹುದು. ಶಾಲೆಯನ್ನು ಆಯ್ಕೆ ಮಾಡುವ ಮೊದಲು ಆ ಶಾಲೆಯ ಮುಖ್ಯೋಪಾಧ್ಯಾಯರೊಂದಿಗೆ ಅನುಮತಿಯ ಕುರಿತಾದ ಚರ್ಚೆ ನಡೆಸುವುದು ಆ ಶಾಲೆ ಮತ್ತು ತರಬೇತಿ ಕೇಂದ್ರದ ನಡುವಿನ ಉತ್ತಮ ಸಂಬಂಧಕ್ಕೆ ಕಾರಣವಾಗಬಹುದು. ಆ ಶಾಲೆ ಮತ್ತು ತರಬೇತಿ ಕೇಂದ್ರದ ವಿಶಯಕ್ಕೆ ಸಂಬಂಧಿಸಿದ ಅಧ್ಯಾಪಕರು, ಉಪ ಶಿಕ್ಷಣಾಧಿಕಾರಿಗಳು, ಜಿಲ್ಲಾ ವಿದ್ಯಾಧಿಕಾರಿಗಳು, ಡಯೆಟ್, ಶಿಕ್ಷಣ ಉಪ ನಿರ್ದೇಶಕರಿಗೆ ತಿಳಿಸತಕ್ಕದ್ದು.

ಈ ರೀತಿಯಲ್ಲಿ ಶಾಲೆಯನ್ನು ಆಯ್ಕೆ ಮಾಡಿದ ನಂತರ, ಈ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮತ್ತು ಸಹ ಅಧ್ಯಾಪಕರಿಗೆ ತರಬೇತಿಯನ್ನು ನೀಡಬೇಕು. ಅದರ ಕುರಿತಾದ ವಿಷದಾಂಶಗಳನ್ನು ಈ ಕೆಳಗೆ ನೀಡಲಾಗಿದೆ.

### 8.3.2 : ಟೀಚಿಂಗ್ ಪ್ರಾಕ್ಟೀಸ್‌ಗೆ ಆಯ್ಕೆ ಮಾಡಿದ ಶಾಲೆಯ ಪ್ರಧಾನ ಅಧ್ಯಾಪಕರಿಗೆ ಮತ್ತು ಸಹ ಅಧ್ಯಾಪಕರಿಗೆ ತರಬೇತಿ ನೀಡುವುದು :

ಪ್ರಾಕ್ಟೀಸ್ ಟೀಚಿಂಗ್‌ನ ವಿಶದಾಂಶಗಳನ್ನು ಚರ್ಚೆ ಮಾಡುವುದಕ್ಕಾಗಿ ಏಕದಿನ ಕಾರ್ಯಗಾರವನ್ನು ಹಮ್ಮಿಕೊಳ್ಳುವುದು ಉಚಿತವಾಗಿರುವುದು. ಇದಕ್ಕೆ ಎಲ್ಲರ ಉಪಸ್ಥಿತ ಅಗತ್ಯವಾಗಿರುವುದರಿಂದ ಪ್ರತಿಯೋರ್ವರಲ್ಲಿ ಪರಸ್ಪರ ಚರ್ಚಿಸಿದ ನಂತರ ದಿನಾಂಕವನ್ನು ತೀರ್ಮಾನಿಸಬೇಕು. ಕಾರ್ಯಾಗಾರದಲ್ಲಿ, AEO, DIET ರವರ ಉಪಸ್ಥಿತಿಯನ್ನು ಖಾತರಿಪಡಿಸಬೇಕು. ಕಾರ್ಯಾಗಾರದಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಕೆಳಗೆ ವಿವರಿಸಲಾಗಿದೆ.

- ಪ್ರತಿಯೊಂದು ಶಾಲೆಗೆ ಟೀಚಿಂಗ್ ಪ್ರಾಕ್ಟೀಸ್‌ಗಾಗಿ ತಲುಪುವ ವಿದ್ಯಾರ್ಥಿಗಳ ಸಂಖ್ಯೆ.

- ಯಾವ ಯಾವ ತಿಂಗಳಲ್ಲಿ ಟೀಚಿಂಗ್ ಪ್ರಾಕ್ಟೀಸ್ ನಡೆಯುವುದು.
- ಟೀಚಿಂಗ್ ಪ್ರಾಕ್ಟೀಸ್‌ನ ವಿವಿಧ ವಲಯಗಳು.
  - ಶಾಲಾ ಅನುಭವಗಳನ್ನು ಗಳಿಸುವುದು.
  - ಪ್ರಾಕ್ಟೀಸ್ ಟೀಚಿಂಗ್
- ಮೆಂಟರಿಂಗ್‌ನ ವಿಶದಾಂಶಗಳು
- ಪ್ರಧಾನ ಮತ್ತು ಸಹ ಅಧ್ಯಾಪಕರು ಬೆಂಬಲಿಸಬೇಕಾದ ರೀತಿ.
- ಪ್ರಧಾನ ಅಧ್ಯಾಪಕರಿಗೆ ನೀಡಬೇಕಾದ ಸೂಚನೆಗಳು – ವರದಿ

**8.4 ಮೆಂಟರಿಂಗ್‌ನ ವಿಶದಾಂಶಗಳು :**

ಶಾಲಾ ಇಂಟರ್ನ್‌ಶಿಪ್‌ನ್ನು ಮತ್ತಷ್ಟು ಫಲಪ್ರದವಾಗಿಸಲು 2013 – 14 ನೇ ಅಧ್ಯಯನ ವರ್ಷದಿಂದ ಮೆಂಟರಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಅಧ್ಯಾಪಕ ವಿದ್ಯಾರ್ಥಿಯು ಗಳಿಸಿದ ಮನಶಾಸ್ತ್ರಪರವೂ ದಾರ್ಶನಿಕವೂ ಆದ ಆಶಯಗಳನ್ನು ಶಾಲಾ ಹಂತದಲ್ಲಿ ಪ್ರಾಯೋಗಿಕವಾಗಿ ಅಳವಡಿಸಲು ಕೆಲವೊಮ್ಮೆ ಕಷ್ಟವಾಗಬಹುದು. ಇಂತಹ ಸಂದರ್ಭದಲ್ಲಿ ಶಾಲೆಯ ಕಲಿಕಾ ವಾತಾವರಣದ ಪರಿಚಯವಿರುವ ಅಧ್ಯಾಪಕನೊಬ್ಬನಿಗೆ, ಅಧ್ಯಾಪಕ ವಿದ್ಯಾರ್ಥಿಗೆ ವಿಷಯಗಳನ್ನು ಮನದಟ್ಟು ಮಾಡಿಸಲು ಮತ್ತು ಅಗತ್ಯವಾದ ಬೆಂಬಲವನ್ನು ನೀಡಲು ಸಾಧ್ಯವಾಗಬಹುದು. ಈ ರೀತಿಯಲ್ಲಿ ಪರಿಚಯ ಸಂಪನ್ನನಾದ ಅಧ್ಯಾಪಕನೊಬ್ಬನು ಮತ್ತು ತರಬೇತಿ ಅಗತ್ಯವಿರುವ ಅಧ್ಯಾಪಕ ವಿದ್ಯಾರ್ಥಿಯು ಪರಸ್ಪರ ಆಶಯ ವಿನಿಮಯ ಮಾಡುತ್ತಾ ಫಲಪ್ರದವಾದ ಕಲಿಕಾ ಚಟುವಟಿಕೆಗಳನ್ನು ಯೋಜಿಸುವ ಪ್ರಕ್ರಿಯೆಯು ಮೆಂಟರಿಂಗ್ ಆಗಿದೆ. ಮೆಂಟರಿಂಗ್‌ನಿಂದ ಅಧ್ಯಾಪಕ ವಿದ್ಯಾರ್ಥಿಗೆ ಸೂಕ್ತವಾದ ಮಾರ್ಗದರ್ಶನ, ಉಪದೇಶ, ಬೆಂಬಲ, ಉತ್ತಮ ಪಡಿಸುವಿಕೆಗೆ ಅಗತ್ಯವಾದ ಸಲಹೆಗಳು ಸಿಗುವುದು. ಸಾಮರ್ಥ್ಯಗಳನ್ನು ವಿಕಾಸಗೊಳಿಸಿ, ಪಠನಾ ಪ್ರಕ್ರಿಯೆಯಲ್ಲಿ ಹಿರಿಮೆಯನ್ನು ಪ್ರದರ್ಶಿಸಲು ಅಗತ್ಯವಿರುವ ಆತ್ಮಾವಿಶ್ವಾಸವನ್ನು ಅಧ್ಯಾಪಕ ವಿದ್ಯಾರ್ಥಿಗಳಿಸುವುದು ಮೆಂಟರಿಂಗ್‌ನ ಉದ್ದೇಶವಾಗಿದೆ.

**ಮೆಂಟರಿಂಗ್‌ನ ಒಳಿತುಗಳು:**

- ಅಧ್ಯಾಪಕ ವಿದ್ಯಾರ್ಥಿಗೆ ಮತ್ತು ತರಬೇತುದಾರನಿಗೆ ಉತ್ತಮ ಅನುಭವಗಳು ಲಭಿಸುವುದು.
- ಇವರಿಬ್ಬರ ಜ್ಞಾನದ ಪರಿಧಿಯು ವಿಕಾಸಗೊಳ್ಳುವುದು.
- ಶಾಲೆಯೊಂದಿಗೆ ಉತ್ತಮ ಬಾಂಧವ್ಯವನ್ನು ಕಾಯ್ದುಕೊಳ್ಳಲು ಅಧ್ಯಾಪಕ ವಿದ್ಯಾರ್ಥಿಗೆ ಸಾಧ್ಯವಾಗುವುದು.
- ಅಧ್ಯಾಪಕ ವಿದ್ಯಾರ್ಥಿಯ ಸಂಸ್ಥೆ (ITE) ಮತ್ತು ಶಾಲೆಯ ನಡುವಿನ ಬಾಂಧವ್ಯವು ಉತ್ತಮಗೊಳ್ಳುವುದು.
- ಬೋಧನಾ ವಿಧಾನವನ್ನು ಸರಿಯಾಗಿ ಅರಿತುಗೊಳ್ಳಲು ಮತ್ತು ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗುವುದು.
- ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವಾ ಮನೋಭಾವವನ್ನು ಹೊಂದಲು ಅಗತ್ಯವಾದ ಸ್ವಪ್ರತಿಭೆಯನ್ನು ಅರಿತುಕೊಂಡು ಅಭಿವೃದ್ಧಿಪಡಿಸಲು ಅಧ್ಯಾಪಕ ವಿದ್ಯಾರ್ಥಿಗೆ ಸಂದರ್ಭವನ್ನೊದಗಿಸುವುದು.

ಒಬ್ಬ ಮೆಂಟರಿಗೆ ಗರಿಷ್ಠ ಮೂರು ಅಧ್ಯಾಪಕ ವಿದ್ಯಾರ್ಥಿಗೆ (ಮೆಂಟಿ) ತರಬೇತಿಯನ್ನು ನೀಡಬಹುದಾಗಿದೆ. ಅಧ್ಯಾಪಕ ವಿದ್ಯಾರ್ಥಿಗಳನ್ನು ಹಂಚಿಕೊಡುವ ಜವಾಬ್ದಾರಿಯು ಅಧ್ಯಾಪಕ ಶಿಕ್ಷಣ ಸಂಸ್ಥೆಯದ್ದಾಗಿರುವುದು.

**ಮೆಂಟರ್‌ಗಳಿಗಿರುವ ತರಬೇತಿ :**

ಮೆಂಟರಿಂಗ್ ವಿಧಿವಿಧಾನಗಳ ಕುರಿತಾದ ತರಬೇತಿಯನ್ನು ಮೆಂಟರ್‌ಗಳಿಗೆ ನೀಡಬೇಕು. ಅಧ್ಯಾಪಕ ಶಿಕ್ಷಣ ಸಂಸ್ಥೆಯು ಇದನ್ನು ಸಂಘಟಿಸಬೇಕು. ಒಂದರಿಂದ ಮೂರುದಿನಗಳವರೆಗಿನ ತರಬೇತಿ ಕಾರ್ಯಾಗಾರವನ್ನು ಇದಕ್ಕಾಗಿ ಸಂಘಟಿಸಬೇಕು. ಮೆಂಟರ್‌ಗಳಿಗಿರುವ ಓದಿನ ಟಿಪ್ಪಣಿಗಳನ್ನು SCERT ಯು ತಯಾರಿಸಿ ಕೊಡುವುದು. ಓದಿನ ಟಿಪ್ಪಣಿಯ ಪ್ರತಿಯನ್ನು ಅನುಬಂಧದಲ್ಲಿ ಸೇರಿಸಲಾಗಿದೆ. ಮೆಂಟರ್‌ಗಳಿಗಿರುವ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ನೀಡಲು ಡಯಟ್ ನೇತೃತ್ವವನ್ನು ವಹಿಸಬೇಕು.

ತರಬೇತಿಯಲ್ಲಿ ಒಳಗೊಳ್ಳಬೇಕಾದ ವಿಷಯಗಳು :

- ಮೆಂಟರಿಂಗ್ ಎಂದರೇನು?
- ಮೆಂಟರಿನ ಜವಾಬ್ದಾರಿಗಳು?
- ನೂತನ ಬೋಧನಾ ತಂತ್ರಗಳು
- ಯೋಜನೆ
- ಮೌಲ್ಯಮಾಪನ

**ಅಧ್ಯಾಪಕ ವಿದ್ಯಾರ್ಥಿಗಳು ನಿರ್ವಹಿಸಬೇಕಾದ ಪ್ರಧಾನ ಚಟುವಟಿಕೆಗಳು**

- ತರಗತಿ ನಿರೀಕ್ಷಣೆ
- ಮೆಂಟರಿನ ಸಹಾಯಕನಾಗಿ ಕಾರ್ಯನಿರ್ವಹಣೆ
- ಕಲಿಕೋಪಕರಣಗಳನ್ನು ಉತ್ತಮಗೊಳಿಸಿ ನೀಡುವುದು.
- ಯೋಜನೆ
- ಬೋಧನೆಯನ್ನು ನಿರ್ವಹಿಸುವುದು.
- ಕಲಿಕೆಯ ಮೌಲ್ಯಮಾಪನ
- ವಿವಿಧ ದಾಖಲೆಗಳನ್ನು ತಯಾರಿಸುವುದು.
- ಶಾಲೆಯ ವಿವಿಧ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವುದು.

ಈ ರೀತಿಯಲ್ಲಿ ಒಂದು ಶಾಲೆಯಲ್ಲಿ ನಡೆಯುವ ಎಲ್ಲಾ ರೀತಿಯ ಕಾರ್ಯಚಟುವಟಿಕೆಗಳನ್ನು ಪರಿಚಯಸಲ್ಪಡುವ ಮೂಲಕ ಅದನ್ನು ಸೂಕ್ತವಾಗಿ ಅರಿತುಕೊಳ್ಳಲು ಅಗತ್ಯವಾದ ಎಲ್ಲಾ ರೀತಿಯ ಸಹಾಯ, ಸಲಹೆ ಮತ್ತು ಬೆಂಬಲವು ಮೆಂಟರಿನ ಮೂಲಕ ಸಾಧ್ಯವಾಗಬೇಕು.

ಅಧ್ಯಾಪಕ ವಿದ್ಯಾರ್ಥಿಗಳ ಟೀಚಿಂಗ್ ಪ್ರಾಕ್ಟಿಸ್ ಮುಗಿದಾಗ, ಮೆಂಟರ್,ಮೆಂಟರಿಂಗ್ ವರದಿಯನ್ನು ನೀಡಬೇಕಾಗುವುದು. ವಿವರಣಾತ್ಮಕವಾದ ನಿರೀಕ್ಷಣೆ ಮತ್ತು ವಸ್ತುನಿಷ್ಠವಾದ ಅಭಿಪ್ರಾಯಗಳು ಈ ವರದಿಯಲ್ಲಿರಬೇಕು. ಅದಕ್ಕೆ ಸಂಬಂಧಿಸಿದ ಫಾರ್ಮೇಟನ್ನು ಅನುಬಂಧ 5 ರಲ್ಲಿ ಕೊಡಲಾಗಿದೆ.

### 8.5 ಟೀಚಿಂಗ್ ಪ್ರಾಕ್ಟೀಸ್ ವಿವರಣೆಗಳು :

ಟೀಚಿಂಗ್ ಪ್ರಾಕ್ಟಿಸ್ ಸೆಮೆಸ್ಟರ್ 2 ಮತ್ತು 4 ರಲ್ಲಿ ಇರುವುದು. ಎರಡನೇ ಸೆಮೆಸ್ಟರ್‌ನಲ್ಲಿ 25 ದಿವಸಗಳು ಕಿರಿಯ ಪ್ರಾಥಮಿಕ ಹಂತದಲ್ಲಿ ಮತ್ತು ಸೆಮೆಸ್ಟರ್ 4 ರಲ್ಲಿ 35 ದಿವಸಗಳು ಕಿರಿಯ ಮತ್ತು ಹಿರಿಯ ಪ್ರಾಥಮಿಕ ವಿಭಾಗದಲ್ಲಿರುವುದು.

### 8.5.1 2ನೇ ಸೆಮೆಸ್ಟರ್‌ನ ಟೀಚಿಂಗ್ ಪ್ರಾಕ್ಟೀಸ್ :

2ನೇ ಸೆಮೆಸ್ಟರ್‌ನ ಒಟ್ಟು 25 ದಿವಸಗಳ ಟೀಚಿಂಗ್ ಪ್ರಾಕ್ಟೀಸ್‌ನಲ್ಲಿ 10 ದಿನಗಳು ಶಾಲಾ ಅನುಭವಗಳನ್ನು ಗಳಿಸುವುದಕ್ಕೂ ಉಳಿದ 15 ದಿನಗಳನ್ನು ಟೀಚಿಂಗ್ ಪ್ರಾಕ್ಟೀಸ್ ನಡೆಸುವುದಕ್ಕೂ ಮೀಸಲಿಡಬೇಕು. ಶಾಲಾ ಅನುಭವಗಳನ್ನು ಗಳಿಸುವುದಕ್ಕೆ ಮೀಸಲಿಟ್ಟು 10 ದಿನಗಳಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು:

- ಶಾಲಾ ಲ್ಯಾಬ್ – ಲೈಬ್ರರಿ ಚಟುವಟಿಕೆಗಳನ್ನು ತಿಳಿದುಕೊಳ್ಳುವುದು.
- ಮಧ್ಯಾಹ್ನದ ಗಂಜಿ ಊಟದ ವ್ಯವಸ್ಥೆಗೆ ನೇತೃತ್ವ ನೀಡುವುದು.
- ತರಗತಿ ಕಾರ್ಯ ಚಟುವಟಿಕೆಗಳಿಗೆ ಸಹಾಯ ನೀಡುವುದು.
- ವಿದ್ಯಾರ್ಥಿಗಳನ್ನು ನಿರೀಕ್ಷಿಸುವುದು.
- ಸರ್ವೇ ನಡೆಸುವುದು.
- ಪ್ರಾಯೋಗಿಕ ಚಟುವಟಿಕೆಗಳಿಗೆ, ನಿರೀಕ್ಷಣೆಗಳಿಗೆ, ಸಂದರ್ಶನಗಳಿಗೆ ವಿನಿಯೋಗಿಸುವುದು.

### 8.5.2 ಎರಡನೇ ಸೆಮೆಸ್ಟರ್‌ನಲ್ಲಿ ವಿಷಯಾಧಾರಿತ ಪ್ರಾಕ್ಟೀಸ್ ಟೀಚಿಂಗ್‌ನ ವಿವರಣೆಗಳು :

**(ಕಿರಿಯ ಪ್ರಾಥಮಿಕ ವಿಭಾಗ)**

| | | | |
|---|---|---|---|
| 1. | ಕನ್ನಡ | : | 5 ಪಿರಿಯೇಡ್ |
| 2. | ಇಂಗ್ಲೀಷ್ | : | 5 ಪಿರಿಯೇಡ್ |
| 3. | ಪರಿಸರ ವಿಭಾಗ | : | 5 ಪಿರಿಯೇಡ್ |
| 4. | ಗಣಿತ | : | 5 ಪಿರಿಯೇಡ್ |
| 5. | ಕಲಾ ಶಿಕ್ಷಣ | : | 2 ಪಿರಿಯೇಡ್ |
| 6. | ವೃತ್ತಿ ಪರಿಚಯ ಶಿಕ್ಷಣ | : | 2 ಪಿರಿಯೇಡ್ |
| 7. | ಆರೋಗ್ಯ ಮತ್ತು ದೈಹಿಕ ಶಿಕ್ಷಣ | : | 2 ಪಿರಿಯೇಡ್ |

**I ಮತ್ತು II ನೇ ತರಗತಿಯಲ್ಲಿ**

ಸಂಯೋಜಿತ : 2 ದಿನಗಳು ( 5 ಪಿರಿಯೇಡ್‌ನಂತೆ x 2 ದಿನಗಳು)

ಒಬ್ಬ ಅಧ್ಯಾಪಕ ವಿದ್ಯಾರ್ಥಿಗೆ ಪ್ರತಿದಿನದಲ್ಲಿ 2 ತರಗತಿಗಳು ಸಿಗುವ ರೀತಿಯಲ್ಲಿ ತರಗತಿಯನ್ನು ಕ್ರಮೀಕರಿಸಬೇಕು.

ಶಾಲಾ ವೇಳಪಟ್ಟಿಯಲ್ಲಿ ಈ ಪ್ರಕಾರವಾಗಿ ಯಾವೆಲ್ಲಾ ಪಿರಿಯೇಡ್‌ಗಳು ಬರುವುದೆಂದು ಮೊದಲು ತಿಳಿದುಕೊಂಡು ಅದನ್ನು ಒಳಗೊಂಡಂತೆ ತನ್ನ ಸ್ವಂತ ಪಿರೀಯೇಡ್‌ಗಳ ಸೇರ್ಪಡೆಯೊಂದಿಗೆ ಟೈಂಟೇಬಲ್ ಒಂದನ್ನು ಅಧ್ಯಾಪಕ ವಿದ್ಯಾರ್ಥಿ ತಯಾರಿಸಿ ಇಟ್ಟುಕೊಂಡಿರಬೇಕು. ತರಗತಿ ನಡೆಸುವ ಎರಡು ಪಿರೆಯೆಡ್‌ಗಳನ್ನು ಹೊರತುಪಡಿಸಿ ಉಳಿದ ಪಿರಿಯೇಡ್‌ಗಳನ್ನು ಪ್ರಾಕ್ಟೀಸಿಂಗ್ ಅಧ್ಯಾಪಕರ ಮತ್ತು ಸಹಪಾಠಿಗಳ ತಲಾ ಒಂದೊಂದು ತರಗತಿಯನ್ನು ಸಂಬಂಧಿಸಿ ನಿರೀಕ್ಷಿಸುವುದಕ್ಕಾಗಿ ಉಪಯೋಗಿಸಬೇಕು. **ಅಧ್ಯಾಪಕ ವಿದ್ಯಾರ್ಥಿ ನಿರ್ವಹಿಸುವ ಒಂದೊಂದು ವಿಷಯದಲ್ಲಿ ಒಂದು ಪಿರಿಯೆಡ್‌ನಂತಾದರೂ ಐ.ಸಿ.ಟಿ. ಸಾಧ್ಯತೆಯನ್ನು ಖಾತರಿಪಡಿಸಬೇಕು.** ಇದಕ್ಕನುಸಾರವಾಗಿ ಕಲಿಕಾ ಯೋಜನೆಯನ್ನು ಅಧ್ಯಾಪಕ ವಿದ್ಯಾರ್ಥಿ ತಯಾರಿಸಿದ್ದಾನೆಂಬುದನ್ನು ಟೀಚರ್ ಎಜ್ಯುಕೇಟರ್ ಖಾತರಿ ಪಡಿಸಬೇಕು.

### 8.5.3 ಯೂನಿಟ್ ಟೆಸ್ಟ್ ನಿರ್ವಹಣೆ :

ಒಂದು ಭಾಷಾ ವಿಷಯದಲ್ಲಿ ಮತ್ತು ಭಾಷೇತರ ವಿಷಯದಲ್ಲಿಯೂ (EVS/ಗಣಿತ) ಯೂನಿಟ್ ಟೆಸ್ಟ್‌ಗಳನ್ನು ನಡೆಸಿ, ಮೌಲ್ಯಮಾಪನವನ್ನು ನಡೆಸಿ ಅಂಕಗಳನ್ನು ನೀಡಿರಬೇಕು. ಅದರ ಪ್ರಶ್ನೆ ಪತ್ರಿಕೆ, ಅಂಕ ಪಟ್ಟಿಯನ್ನು ಪ್ರತೀ ಅಧ್ಯಾಪಕ ವಿದ್ಯಾರ್ಥಿಯೂ ತೆಗೆದಿರಿಸಿಕೊಂಡಿರಬೇಕು. ಯೂನಿಟ್ ಟೆಸ್ಟ್‌ಗೆ ಬೇಕಾದ ಪ್ರಶ್ನೆ ಪತ್ರಿಕೆ, ಪ್ರಶ್ನೆ ಪತ್ರಿಕೆಯನ್ನು ತಯಾರಿಸಲು ಬೇಕಾದ ಮಾರ್ಗ ನಿರ್ದೇಶಗಳನ್ನು (Norms) ಪಾಲಿಸಲಾಗಿದೆ ಎಂದು ಟೀಚರ್ ಎಜ್ಯುಕೇಟರ್ ಖಾತರಿಪಡಿಸಿರಬೇಕು.

### 8.5.4 ಎರಡನೇ ಸೆಮೆಸ್ಟರ್‌ನ ($S_2$) ಇಂಟರ್ನ್‌ಶಿಪ್ ವಿವರಣೆಗಳ ಸಂಗ್ರಹ

ಸೆಮೆಸ್ಟರ್ : ಎರಡು ($S_2$)

ವಿಭಾಗ : ಕಿರಿಯ ಪ್ರಾಥಮಿಕ ಮಟ್ಟ

| ವಿಷಯ | ತರಗತಿ ನಿರೀಕ್ಷಣೆಯ ಅನುಭವ | ಟೀಚಿಂಗ್ ಪ್ರಾಕ್ಟಿಸ್ | ಒಟ್ಟು |
|---|---|---|---|
| ಟೀಚಿಂಗ್ ಪ್ರಾಕ್ಟೀಸ್‌ನ ದಿವಸಗಳು | 10 | 15 | 25 |

**ತರಗತಿ ವಿವರಣೆಗಳು**

| ವಿಷಯ | ಪಿರೆಡ್‌ಗಳು | ಟೀಚಿಂಗ್ ಪ್ರಾಕ್ಟಿಸ್‌ನ ವೇಳೆಯಲ್ಲಿ ತರಗತಿ ನಿರೀಕ್ಷಣೆ ಮತ್ತು ವಿಶ್ಲೇಷಣೆ | |
|---|---|---|---|
| | | ಪ್ರಾಕ್ಟೀಸಿಂಗ್ ಟೀಚರ್ | ಸಹಕಲಿಕೆದಾರ |
| ಕನ್ನಡ | 5 ಪಿರಿಯೇಡ್ | 1 | 1 |
| ಇಂಗ್ಲೀಷ್ | 5 ಪಿರಿಯೇಡ್ | 1 | 1 |
| ಪರಿಸರ ವಿಜ್ಞಾನ | 5 ಪಿರಿಯೇಡ್ | 1 | 1 |
| ಗಣಿತ | 5 ಪಿರಿಯೇಡ್ | 1 | 1 |
| ಕಲಾ ಶಿಕ್ಷಣ | 2 ಪಿರಿಯೇಡ್ | 1 | 1 |
| ವೃತ್ತಿ ಪರಿಚಯ ಶಿಕ್ಷಣ | 2 ಪಿರಿಯೇಡ್ | 1 | 1 |
| ಆರೋಗ್ಯ ಮತ್ತು ದೈಹಿಕ ಶಿಕ್ಷಣ | 2 ಪಿರಿಯೇಡ್ | 1 | - |
| ತರಗತಿ I, II | 2 ದಿವಸ (5 ಪಿರಿಯೇಡ್ × 2 ದಿವಸ) | | |

### 8.5.5 ಎರಡನೇ ಸೆಮೆಸ್ಟರ್‌ನಲ್ಲಿ ($S_2$) ಇಂಟರ್ನ್‌ಶಿಪ್ ಅಂಕಗಳ ವಿಷದಾಂಶಗಳು :

ಎರಡನೇ ಸೆಮೆಸ್ಟರ್‌ನಲ್ಲಿ ಇಂಟರ್ನ್‌ಶಿಪ್‌ಗಿರುವ ಒಟ್ಟು ಅಂಕಗಳು 200 ಆಗಿವೆ. ಇದರ ಆಧಾರದಲ್ಲಿ ವಿವಿಧ ವಿಷಯಗಳಿಗೆ ನೀಡಿದ ಅಂಕಗಳ ವರ್ಗೀಕರಣವು ಕೆಳಗಿವೆ.

| | | |
|---|---|---|
| ಕನ್ನಡ | : | ಅಂಕಗಳು 40 |
| ಇಂಗ್ಲೀಷ್ | : | ಅಂಕಗಳು 30 |
| ಪರಿಸರ ವಿಜ್ಞಾನ | : | ಅಂಕಗಳು 40 |
| ಗಣಿತ | : | ಅಂಕಗಳು 40 |
| ಕಲಾ ಶಿಕ್ಷಣ | : | ಅಂಕಗಳು 10 |
| ವೃತ್ತಿ ಶಿಕ್ಷಣ | : | ಅಂಕಗಳು 10 |
| ಆರೋಗ್ಯ ಮತ್ತು ದೈಹಿಕ ಶಿಕ್ಷಣ | : | ಅಂಕಗಳು 20 |
| ವ್ಯಕ್ತಿತ್ವ ವಿಕಸನ | : | ಅಂಕಗಳು 10 |
| **ಒಟ್ಟು** | **:** | **ಅಂಕಗಳು 200** |

ಇಲ್ಲಿ ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ ವಿವರಣೆಗಳನ್ನು ಅನುಬಂಧದಲ್ಲಿ ಸೇರಿಸಲಾಗಿದೆ. ಮಾರ್ಗದರ್ಶನದ ಆಧಾರದಲ್ಲಿ 10 ಅಂಕಗಳಿಗೆ ಅಗತ್ಯವಾದ ಮೌಲ್ಯಮಾಪನವನ್ನು ನಡೆಸಬೇಕಾಗಿದೆ. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಅಂಕ ನೀಡುವಿಕೆಯ ಕುರಿತು ಕೆಳಗೆ ನೀಡಿದ ಮಾನದಂಡಗಳನ್ನು ಅನುಸರಿಸಬೇಕು.

### 8:5.6 ಮಾನದಂಡಗಳು :

1. ಮೆಂಟರ್ ನೀಡುವ ವರದಿಯ ಆಧಾರದಲ್ಲಿ ಟೀಚರ್ ಎಜ್ಯುಕೇಟರ್ ನೀಡುವ ಅಂಕಗಳು ಒಟ್ಟು ಅಂಕಗಳ 25% ಆಗಿದೆ.
2. ಯೋಜನೆ, ದಾಖಲೆಗಳು, ತರಗತಿ ಇತ್ಯಾದಿಗಳ ಆಧಾರದಲ್ಲಿ ನೀಡಬೇಕಾದ ಅಂಕಗಳು ಒಟ್ಟು ಅಂಕಗಳ 25% ಆಗಿದೆ.
3. ಶಾಲೆಯ ವಿದ್ಯಾರ್ಥಿಗಳ ಅಭಿಪ್ರಾಯ, ಕಲಿಕಾ ಪುರೋಗತಿ, ಯೂನಿಟ್ ಟೆಸ್ಟ್ ಇತ್ಯಾದಿಗಳನ್ನು ಪರಿಗಣಿಸಿಕೊಂಡು ನೀಡುವ ಅಂಕಗಳು ಒಟ್ಟು ಅಂಕಗಳ 25% ಆಗಿದೆ.
4. ಸಂಶೋಧನಾತ್ಮಕ ಕಲಿಕಾ ಚಟುವಟಿಕೆಗಳಿಗೆ ನೀಡಬೇಕಾದ
   ಅಂಕಗಳು ಒಟ್ಟು ಅಂಕಗಳ 25% ಆಗಿದೆ.
   (ಕೇಸ್‌ಸ್ಟಡಿ, ಕ್ರಿಯಾ ಸಂಶೋಧನೆ, ಸರ್ವೆ ಇತ್ಯಾದಿ)

ಈ ಮೇಲಿನ ಮಾನದಂಡಗಳನ್ನು ಅನುಸರಿಸಿಕೊಂಡ ಮೌಲ್ಯ ಮಾಪನವು ಹೆಚ್ಚು ಕೆಲಸದ ಒತ್ತಡ (Work load) ಕ್ಕೆ ಕಾರಣವಾಗುವುದರಿಂದ, ಎರಡು ವಲಯಗಳಲ್ಲಿ ಮೌಲ್ಯಮಾಪನ ನಡೆಸುವುದು ಸೂಕ್ತವಾಗಿದೆ. ಆದರೆ ಅಂಕಗಳನ್ನು ನೀಡಲು ನಾಲ್ಕು ವಲಯಗಳನ್ನು (ಮಾನದಂಡಗಳನ್ನು) ಗರಿಷ್ಠ ಪ್ರಮಾಣದಲ್ಲಿ ಸದುಪಯೋಗಪಡಿಸಿಕೊಳ್ಳಬೇಕಾಗಿದೆ.

**ಪರಿಗಣಿಸಬಹುದಾದ ವಲಯಗಳು :**

1. ಮೆಂಟರ್ ಮತ್ತು ಶಾಲಾ ಅಧಿಕಾರಿಗಳ ವರದಿಗಳ ಆಧಾರದಲ್ಲಿ ನೀಡುವ ಅಂಕಗಳು : ಒಟ್ಟು ಅಂಕಗಳ 50%
2. ಯೋಜನೆ, ದಾಖಲೆ, ತರಗತಿ, ಯೂನಿಟ್ ಟೆಸ್ಟ್, ಬೋಧನೆ ಇತ್ಯಾದಿಗಳ ಆಧಾರದಲ್ಲಿ ನೀಡುವ ಅಂಕಗಳು : ಒಟ್ಟು ಅಂಕಗಳ 50%.

**8.57 ಎರಡನೇ ಸೆಮಿಸ್ಟರ್‌ನಲ್ಲಿ ($S_2$) ಇಂಟರ್ನ್‌ಶಿಪ್ ಕ್ರೋಡೀಕರಣ**

**ಫೋರ್ಮೇಟ್ 2 ($F_2$) ಇಂಟರ್ನ್‌ಶಿಪ್ ಕ್ರೋಡೀಕರಣ – ಎರಡನೇ ಸೆಮಿಸ್ಟರ್**

| ಕ್ರಮ ಸಂಖ್ಯೆ | ಮಗುವಿನ ಹೆಸರು | ವಿಷಯ | | | | | | | | ಒಟ್ಟು ಅಂಕಗಳು | ಗ್ರೇಡ್ | ಷರಾ |
|---|---|---|---|---|---|---|---|---|---|---|---|---|
| | | ಕನ್ನಡ | ಇಂಗ್ಲೀಷ್ | ಪರಿಸರ ವಿಜ್ಞಾನ | ಗಣಿತ | ಕಲಾ | ವೃತ್ತಿ ಶಿಕ್ಷಣ | ಆರೋಗ್ಯ ಶಿಕ್ಷಣ | ವ್ಯಕ್ತಿತ್ವ ವಿಕಸನ | | | |
| | ಗರಿಷ್ಟ ಅಂಕಗಳು→ | (40) | (30) | (40) | (40) | (10) | (10) | (20) | (10) | (200) | | |
| 1 | | | | | | | | | | | | |
| 2 | | | | | | | | | | | | |
| 3 | | | | | | | | | | | | |
| 4 | | | | | | | | | | | | |

ಸ್ಥಳ :
ದಿನಾಂಕ :

ಸಹಿ:
ಪ್ರಾಂಶುಪಾಲರ ಹೆಸರು:
ಶಾಲಾ ಮುದ್ರೆ :

**8.5.8 ಇಂಟರ್ನ್‌ಶಿಪ್ ಮೌಲ್ಯನಿರ್ಣಯ**

ಎರಡನೇ ಸೆಮಿಸ್ಟರ್ ($S_4$) ನ ಇಂಟರ್ನ್‌ಶಿಪ್‌ನಲ್ಲಿ ಒಟ್ಟಾಗಿ $C^+$ ಗ್ರೇಡ್ (50 – 59% ) ಅಂಕಗಳನ್ನು ಪಡೆಯಲು ಸಾಧ್ಯವಾದರೆ ಮಾತ್ರ ಅಧ್ಯಾಪಕ ವಿದ್ಯಾರ್ಥಿ 2ನೇ ಸೆಮಿಸ್ಟರ್‌ರನ್ನು ಪೂರ್ತಿ ಮಾಡಿದ್ದಾನೆಂದು ತಿಳಿಯಲಾಗುತ್ತದೆ. ಅಂಕಗಳನ್ನು ಕ್ರೋಡೀಕರಣಗೊಳಿಸುವುದಕ್ಕಾಗಿ ಮೇಲೆ ನೀಡಿದ ಫೋರ್ಮೇಟನ್ನು ಉಪಯೋಗಿಸಬಹುದು.

**8.5.9 ನಾಲ್ಕನೇ ಸೆಮಿಸ್ಟರ್‌ನಲ್ಲಿ ($S_4$) ಇಂಟರ್ನ್‌ಶಿಪ್ ಅಂಕಗಳನ್ನು ನೀಡುವುದು.**

ನಾಲ್ಕನೇ ಸೆಮಿಸ್ಟರ್‌ನಲ್ಲಿ 35 ದಿವಸಗಳನ್ನು ಇಂಟರ್ನ್‌ಶಿಪ್‌ಗಾಗಿ ತೆಗೆದಿರಿಸಲಾಗಿದೆ. ಇದರಲ್ಲಿ ಮೊದಲ 10 ದಿನಗಳನ್ನು ಕಿರಿಯ ಪ್ರಾಥಮಿಕ ಹಂತದಲ್ಲಿನ ಟೀಚಿಂಗ್ ಪ್ರಾಕ್ಟಿಸ್‌ಗೆ ತೆಗೆದಿರಿಸಬೇಕು. ಒಂದು ದಿನದಲ್ಲಿ 2 ಪಿರಿಯೆಡನ್ನು ಮೀಸಲಾಗಿರಿಸಿ ನಿರ್ವಹಿಸುವ ಟೀಚಿಂಗ್ ಪ್ರಾಕ್ಟಿಸ್ ಹೆಚ್ಚು ಫಲಪ್ರದವಾಗಿರುವುದು.

**8.5.10 ವಿಷಯ ಮತ್ತು ಪಿರಿಯೆಡ್ ಹಂಚುವಿಕೆ ನಾಲ್ಕನೇ ಸೆಮಿಸ್ಟರ್‌ನ ಕಿರಿಯ ಪ್ರಾಥಮಿಕ ವಿಭಾಗ**

| ಕ್ರಮ ಸಂಖ್ಯೆ | ವಿಷಯ | ಪಿರಿಯೆಡ್ |
|---|---|---|
| 1. | ಕನ್ನಡ | 5 |
| 2. | ಇಂಗ್ಲಿಷ್ | 5 |
| 3. | ಪರಿಸರ | 5 |
| 4. | ಗಣಿತ | 5 |

ಇಲ್ಲಿ ಪ್ರತಿಯೊಂದು ವಿಷಯದ ಒಂದೊಂದು ಪಿರಿಯೆಡ್ ಆದರೂ ಐ.ಸಿ.ಟಿ. ಸಾಧ್ಯತೆಯಿಂದ ಕೂಡಿರಬೇಕು.

## 8.5.11 ಹಿರಿಯ ಪ್ರಾಥಮಿಕ ವಿಭಾಗದಲ್ಲಿ ಇಂಟರ್ನ್‌ಶಿಪ್

25 ದಿನಗಳನ್ನು ಯು.ಪಿ. ನಾಲ್ಕನೇ ಸೆಮೆಸ್ಟರಿನ ವಿಭಾಗದಲ್ಲಿ ಇಂಟರ್ನ್‌ಶಿಪ್‌ನ್ನು ನಿರ್ವಹಿಸಲಿರುವುದು. ಇದರ ಆರಂಭದ 5 ದಿನಗಳನ್ನು ಯು.ಪಿ. ವಿಭಾಗದ ತರಗತಿ ನಿರೀಕ್ಷಣೆಗಾಗಿ ಬಳಸಬೇಕು. ಉಳಿದ 20 ದಿನಗಳಲ್ಲಿ ಒಂದು ದಿನದಲ್ಲಿ ಎರಡು ಪಿರಿಯೆಡ್‌ಗಳಂತೆ 40 ಪಿರಿಯೆಡ್‌ಗಳನ್ನು ಪ್ರತಿ ಅಧ್ಯಾಪಕ ವಿದ್ಯಾರ್ಥಿ ಯು.ಪಿ. ವಿಭಾಗದಲ್ಲಿ ಟೀಚಿಂಗ್ ಪ್ರಾಕ್ಟೀಸ್‌ಗಾಗಿ ಬಳಸಬೇಕು.

### 8.5.12 ವಿಷಯ ಮತ್ತು ಪಿರಿಯೆಡ್ ಹಂಚುವಿಕೆ – ನಾಲ್ಕನೇ ಸೆಮೆಸ್ಟರ್‌ನ ಯು.ಪಿ. ವಿಭಾಗ

| ಸಂಖ್ಯೆ | ವಿಷಯ | ಪಿರಿಯೆಡ್ |
|---|---|---|
| 1. | ಕನ್ನಡ | 7 |
| 2. | ಇಂಗ್ಲೀಷ್ | 7 |
| 3. | ಐಚ್ಚಿಕ ವಿಷಯಗಳು (SS/Sc/Maths) | 20 |
| 4. | ಕಲಾ ಶಿಕ್ಷಣ | 2 |
| 5. | ವೃತ್ತಿ ಪರಿಚಯ ಶಿಕ್ಷಣ | 2 |
| 6. | ಆರೋಗ್ಯ ಮತ್ತು ದೈಹಿಕ ಶಿಕ್ಷಣ | 2 |
| | ಒಟ್ಟು | **40** |

ನಾಲ್ಕನೇ ಸೆಮೆಸ್ಟರ್‌ನಲ್ಲಿ ಸಮಾಜ ವಿಜ್ಞಾನ, ಮೂಲ ವಿಜ್ಞಾನ, ಗಣಿತ ಇತ್ಯಾದಿಗಳು ಐಚ್ಚಿಕ ವಿಷಯಗಳಾಗಿವೆ. ಇವುಗಳಲ್ಲಿ ಅಧ್ಯಾಪಕ ವಿದ್ಯಾರ್ಥಿ ಕಲಿಕೆಗಾಗಿ ಆಯ್ಕೆ ಮಾಡುವ ಒಂದು ವಿಷಯದಲ್ಲಿ ಟೀಚಿಂಗ್ ಪ್ರಾಕ್ಟೀಸನ್ನು ನಿರ್ವಹಿಸಬೇಕು. ಇದಕ್ಕಾಗಿ 20 ಪಿರಿಯೆಡ್‌ಗಳನ್ನು ತೆಗೆದಿರಿಸಲಾಗಿದೆ.

ಎರಡನೇ ಸೆಮೆಸ್ಟರ್‌ನಲ್ಲಿ ಸೂಚಿಸಿದಂತೆ ಓರ್ವ ಅಧ್ಯಾಪಕ ವಿದ್ಯಾರ್ಥಿಗೆ ಒಂದು ದಿನದಲ್ಲಿ ಎರಡು ತರಗತಿಗಳು ಸಿಗುವಂತೆಯೇ ನಾಲ್ಕನೇ ಸೆಮೆಸ್ಟರ್‌ನಲ್ಲಿಯೂ ತರಗತಿಗಳನ್ನು ಕ್ರಮೀಕರಿಸಬೇಕು. ತರಗತಿ ನಡೆಸುವ ಎರಡು ಪಿರಿಯೇಡ್‌ಗಳನ್ನು ಹೊರತು ಪಡಿಸಿ ಉಳಿದ ಪಿರಿಯೆಡ್‌ಗಳನ್ನು ಪ್ರಾಕ್ಟೀಸಿಂಗ್ ಅಧ್ಯಾಪಕರ ಮತ್ತು ಸಹಪಾಠಿಗಳ ಒಂದೊಂದು ತರಗತಿಯನ್ನು ಒಂದೊಂದು ವಿಷಯಕ್ಕೆ ಸಂಬಂಧಿಸಿ ನಿರೀಕ್ಷಿಸುವುದಕ್ಕಾಗಿ ಉಪಯೋಗಿಸಬೇಕು. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಕೆಳಗಿನ ತಖ್ತೆಯಲ್ಲಿ ನೀಡಲಾಗಿದೆ. ಅಧ್ಯಾಪಕ ವಿದ್ಯಾರ್ಥಿ ನಿರ್ವಹಿಸುವ ಪ್ರತಿಯೊಂದು ವಿಷಯದಲ್ಲಿಯೂ ಕನಿಷ್ಟ ಒಂದು ಪಿರಿಯೆಡ್ ಆದರೂ ಐ.ಸಿ.ಟಿ. ಸಾಧ್ಯತೆಯನ್ನು ಬಳಸಿ ನಿರ್ವಹಿಸಬೇಕು.

## 8.5.13 ನಾಲ್ಕನೇ ಸೆಮೆಸ್ಟರ್‌ನಲ್ಲಿ ($S_4$) ಇಂಟರ್ನ್‌ಶಿಪ್ ವಿವರಣೆಗಳ ಸಂಗ್ರಹ

ಸೆಮೆಸ್ಟರ್ : 4 (S4)

ವಿಭಾಗ : ಎಲ್ ಪಿ ಮತ್ತು ಯು.ಪಿ

ಟೀಚಿಂಗ್ ಪ್ರಾಕ್ಟೀಸ್ ದಿನಗಳು

| ತರಗತಿ | ಶಾಲಾ ಅನುಭವ ಮತ್ತು ತರಗತಿ ನಿರೀಕ್ಷಣೆ | ಟೀಚಿಂಗ್ ಪ್ರಾಕ್ಟೀಸ್ | ಒಟ್ಟು |
|---|---|---|---|
| 1. ಎಲ್.ಪಿ. | - | 10 | 10 |
| 2. ಯು.ಪಿ. | 5 | 20 | 25 |
| | | ಒಟ್ಟು | **35** |

ತರಗತಿ ವಿಶದಾಂಶಗಳು :

| ತರಗತಿ ವಿಭಾಗ | ವಿಷಯ | ಪಿರಿಯೆಡ್‌ಗಳ ಸಂಖ್ಯೆ | ಟೀಚಿಂಗ್ ಪ್ರಾಕ್ಟೀಸ್‌ನ ಸಂದರ್ಭದಲ್ಲಿ ತರಗತಿ ನಿರೀಕ್ಷಣೆ ಮತ್ತು ವಿಶ್ಲೇಷಣೆ | |
|---|---|---|---|---|
| | | | ಪ್ರಾಕ್ಟೀಸಿಂಗ್ ಟೀಚರ್ | ಸಹಪಾಠಿ |
| ಎಲ್.ಪಿ. | ಕನ್ನಡ | 5 | – | – |
| | ಇಂಗ್ಲೀಷ್ | 5 | – | – |
| | ಪರಿಸರ ವಿಜ್ಞಾನ | 5 | – | – |
| | ಗಣಿತ | 5 | – | – |
| ಯು.ಪಿ. | ಕನ್ನಡ | 7 | 1 | 1 |
| | ಇಂಗ್ಲೀಷ್ | 7 | 1 | 1 |
| | ಐಚ್ಛಿಕ SS/Sc/Maths | 20 | 3 | 2 |
| | ಕಲಾ ಶಿಕ್ಷಣ | 2 | – | – |
| | ವೃತ್ತಿ ಶಿಕ್ಷಣ | 2 | – | – |
| | ಆರೋಗ್ಯ ಮತ್ತು ದೈಹಿಕ ಶಿಕ್ಷಣ | 2 | – | – |
| | ಸಹವಾಸ ಶಿಬಿರ | – | – | – |
| | ಕಲಿಕಾ ಪ್ರವಾಸ | – | – | – |

## 8.5.14 ಯೂನಿಟ್ ಟೆಸ್ಟ್ ನಿರ್ವಹಣೆ

ನಾಲ್ಕನೇ ಸೆಮೆಸ್ಟರ್‌ನಲ್ಲಿ ಕನ್ನಡ, ಇಂಗ್ಲೀಷ್, ಯಾವುದಾದರೂ ಒಂದು ಐಚ್ಛಿಕ ವಿಶಯ (SS/Sc/Maths) ಗಳಲ್ಲಿ ಯೂನಿಟ್ ಟೆಸ್ಟ್ ನಿರ್ವಹಿಸಬೇಕಾಗಿದೆ. ಅದರ ಪ್ರಶ್ನೆ ಪತ್ರಿಕೆ, ಅಂಕ ಪಟ್ಟಿ ಇತ್ಯಾದಿಗಳನ್ನು ಅಧ್ಯಾಪಕ ವಿದ್ಯಾರ್ಥಿ ತೆಗೆದಿರಿಸಬೇಕು. ಯೂನಿಟ್ ಟೆಸ್ಟಿಗಿರುವ ಪ್ರಶ್ನೆ ಪತ್ರಿಕೆಗಳು, ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು ಅಗತ್ಯವಾದ ಮಾನದಂಡಗಳನ್ನು (Norms) ಅನುಸರಿಸಲಾಗಿದೆಯೇ ಎಂದು ಟೀಚರ್ ಎಜ್ಯುಕೇಟರ್ ಖಾತರಿಪಡಿಸಿಕೊಂಡಿರಬೇಕು.

## 8.5.15 ನಾಲ್ಕನೇ ಸೆಮೆಸ್ಟರ್‌ನ ($S_4$) ಇಂಟರ್ನ್‌ಶಿಪ್ ಅಂಕಗಳ ವಿಶದಾಂಶಗಳು

ನಾಲ್ಕನೇ ಸೆಮೆಸ್ಟರ್‌ನಲ್ಲಿ ಇಂಟರ್ನ್‌ಶಿಪ್‌ಗಿರುವ ಗರಿಷ್ಟ ಅಂಕಗಳು 200 ಆಗಿದೆ. ಯೂನಿಟ್ ಟೆಸ್ಟ್‌ನಲ್ಲಿನ ಅಂಕಗಳ ಸಹಿತವಾಗಿ ಪ್ರತಿಯೊಂದು ವಿಷಯದಲ್ಲಿಯೂ ಅಂಕಗಳ ಹಂಚುವಿಕೆಯನ್ನು ಈ ಕೆಳಗೆ ನೀಡಲಾಗಿದೆ. ಒಟ್ಟು 200 ಅಂಕಗಳಲ್ಲಿ, ಸಹವಾಸ ಶಿಬಿರದ 10 ಅಂಕಗಳನ್ನು ಮತ್ತು ಕಲಿಕಾ ಪ್ರವಾಸದ 10 ಅಂಕಗಳನ್ನು ಸೇರಿಸಲಾಗಿದೆ. ಕನ್ನಡ ಮತ್ತು ಇಂಗ್ಲೀಷ್ ವಿಷಯದಲ್ಲಿ ಎಲ್.ಪಿ. ಮತ್ತು ಯು.ಪಿ. ವಿಭಾಗದಲ್ಲಿ ಟೀಚಿಂಗ್ ಪ್ರಾಕ್ಟೀಸ್ ಇರುವುದು. ಐಚ್ಛಿಕ ವಿಶಯದಲ್ಲಿ ಪ್ರತಿಯೊಂದನ್ನು ಒಟ್ಟಾಗಿ ಪರಿಗಣಿಸಿಕೊಂಡು ಅಂಕಗಳ ಹಂಚುವಿಕೆಯನ್ನು ಮಾಡಲಾಗಿದೆ. ಸಹವಾಸ ಶಿಬಿರದ ಅಂಕಗಳು, ಕಲಿಕಾ ಪ್ರವಾಸದ ಅಂಕಗಳನ್ನು ನಾಲ್ಕನೇ ಸೆಮಿಸ್ಟರ್‌ನ ಇಂಟರ್ನ್‌ಶಿಪ್‌ನ ಭಾಗವಾಗಿ ದಾಖಲಿಸಬೇಕಾಗಿದೆ.

## 8.5.16 ಅಂಕಗಳ ಹಂಚುವಿಕೆ

| ಕ್ರಮ ಸಂಖ್ಯೆ | ವಿಷಯ | ಅಂಕಗಳು |
|---|---|---|
| 1. | ಕನ್ನಡ | 30 |
| 2. | ಇಂಗ್ಲೀಷ್ | 30 |
| 3. | ಐಚ್ಛಿಕ SS/Sc/Maths | 60 |
| 4. | ಪರಿಸರ ವಿಜ್ಞಾನ | 10 |
| 5. | ಗಣಿತ | 10 |
| 6. | ಕಲಾ ಶಿಕ್ಷಣ | 10 |
| 7. | ವೃತ್ತಿ ಪರಿಚಯ ಶಿಕ್ಷಣ | 10 |
| 8. | ಆರೋಗ್ಯ ಮತ್ತು ದೈಹಿಕ ಶಿಕ್ಷಣ | 10 |
| 9. | ಸಹವಾಸ ಶಿಬಿರ | 20 |
| 10. | ಕಲಿಕಾ ಪ್ರವಾಸ | 10 |
| | ಒಟ್ಟು | **200** |

ಅಂಕಗಳನ್ನು ನೀಡುವುದಕ್ಕೆ ಎರಡನೇ ಸೆಮೆಸ್ಟರ್‌ನಲ್ಲಿ ನೀಡಲಾದಂತಹ ಮಾನದಂಡಗಳನ್ನು ಸ್ವೀಕರಿಸಬಹುದು.

### 8.5.17 ಸಾಮಾಜಿಕ ಸಂಪರ್ಕ ಸಹವಾಸ ಶಿಬಿರ :

ಸಾಮಾಜಿಕ ಸಂಪರ್ಕ ಸಹವಾಸ ಶಿಬಿರವು ಅಧ್ಯಾಪಕ ವಿದ್ಯಾರ್ಥಿಗಳ ಸಹಕಾರ ಮನೋಭಾವವನ್ನು ಉತ್ತಮಪಡಿಸುವುದ್ಕಕೂ, ಜೀವನ ನೈಪುಣ್ಯಗಳನ್ನು ಗಳಿಸುವುದಕ್ಕೂ ಮೌಲ್ಯಗಳ ಅರಿವಿನೊಂದಿಗೆ ವ್ಯವಹರಿಸುವುದಕ್ಕೂ ಸಂದರ್ಭವನ್ನು ಒದಗಿಸುವ ವೇದಿಕೆಯಾಗಿದೆ. ದೀರ್ಘಕಾಲದ ಶಿಬಿರದಲ್ಲಿ ಅಧ್ಯಾಪಕ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಭಾಗವಹಿಸುವಂತೆ ಮಾಡುವ ಬದಲು, ಉದ್ದೇಶಗಳನ್ನು ಮುಂಗಡವಾಗಿ ನಿಶ್ಚೈಸಿಕೊಂಡು ನಡೆಸುವ ಎರಡು ಅಥವಾ ಮೂರು ಶಿಬಿರಗಳು ಹೆಚ್ಚು ಪರಿಣಾಮಕಾರಿಯಾಗಿದೆ. ಈ ರೀತಿಯ ಶಿಬಿರಗಳು ಉಳಕೊಳ್ಳುವ ರೀತಿ (ರೆಸಿಡೆನ್ಸಿಯಲ್) ಯದ್ದಾಗಿರಬೇಕು. ವೈವಿದ್ಯಮಯ ನೈಪುಣ್ಯಗಳು ವಿಕಾಸಗೊಳ್ಳಲು ಈ ಶಿಬಿರಗಳು ಸಂದರ್ಭವನ್ನೊದಗಿಸಬೇಕು. ನಾಟಕ, ಕ್ರೀಡೆ, ವೃತ್ತಿ ಶಿಕ್ಷಣ, ಚಿತ್ರಕಲೆ, ಸಂಗೀತ ಇತ್ಯಾದಿಗಳನ್ನು ಲಭ್ಯವಾಗಿಸುವ ರೀತಿಯ ಕಾರ್ಯಾಗಾರವನ್ನು ಸಂಘಟಿಸಬೇಕು. ಈ ಶಿಬಿರಗಳು ಎರಡನೇ ಸೆಮೆಸ್ಟರ್‌ನ ನಂತರದ ಎಪ್ರಿಲ್, ಮೇ ತಿಂಗಳಲ್ಲಿ ನಡೆಸಬೇಕು. ಅಗತ್ಯವಿದ್ದರೆ ಒಂದು ಶಿಬಿರವನ್ನು ಮೂರನೇ ಸೆಮೆಸ್ಟರ್‌ನ ನಂತರದ ಡಿಸೆಂಬರ್‌ನಲ್ಲಿ ನಡೆಸಬಹುದು. ಸಮುದಾಯ ಚಟುವಟಿಕೆಗಳನ್ನು ಇದರ ಭಾಗವಾಗಿ ನಿರ್ವಹಿಸುವುದಕ್ಕೂ ಪರಿಗಣನೆಯನ್ನು ನೀಡಬಹುದು.

ಜಿಲ್ಲಾ ಮಟ್ಟದಲ್ಲಿ ಡಯಟಿನ ಸಹಯೋಗದೊಂದಿಗೆ ಈ ರೀತಿಯ ಕಾರ್ಯಾಗಾರಗಳನ್ನು ಉತ್ತಮ ಪಡಿಸಲು ಕ್ರಮಗಳನ್ನು ಕೈಗೊಳ್ಳಬಹುದು. ಇದಕ್ಕಿರುವ ಸಾಮಾನ್ಯ ಮಾರ್ಗದರ್ಶನಗಳನ್ನು ಅನುಬಂಧ – 6 ರಲ್ಲಿಸೇರಿಸಲಾಗಿದೆ.

ಸಮುದಾಯ ಸಹವಾಸ ಶಿಬಿರಕ್ಕೆ ನೀಡುವ ಅಂಕಗಳು 20 ಆಗಿದೆ. ಶಿಬಿರವು ನಡೆಯುತ್ತಿರುವಂತೆಯೇ ಇದರ ಮೌಲ್ಯಮಾಪನ ನಡೆಸಬೇಕು. ನಾಲ್ಕನೇ ಸೆಮೆಸ್ಟರ್‌ನ ಭಾಗವಾಗಿ ಈ ಶಿಬಿರದ ಅಂಕಗಳನ್ನು ದಾಖಲಿಸಬೇಕಾಗಿದೆ. ಅದಕ್ಕಿರುವ ನಿರ್ದಿಷ್ಟ ಫೋರ್ಮೇಟನ್ನು ತಯಾರಿಸಿ, ಅಂಕಗಳನ್ನು ದಾಖಲಿಸಿ, ಕ್ರೋಡೀಕರಿಸಿ ನೀಡಬೇಕಾದದ್ದು ಟೀಚರ್ ಎಜ್ಯುಕೇಟರ್‌ನ ಜವಾಬ್ದಾರಿಯಾಗಿದೆ. ಸಮುದಾಯ ಸಹವಾಸ ಶಿಬಿರದಲ್ಲಿ ಭಾಗವಹಿಸುವುದು ಕಡ್ಡಾಯವಾಗಿದೆ. ಶಿಬಿರದ ಪ್ರಾಧಾನ್ಯತೆಯನ್ನು ಪರಿಗಣಿಸಿಕೊಂಡು 20 ಅಂಕಗಳಲ್ಲಿ ಕನಿಷ್ಟ 10 ಅಂಕಗಳನ್ನಾದರೂ ($C^+$ grade : 50 - 59% ಅಂಕಗಳು) ಪಡೆದರೆ ಮಾತ್ರ ಅಧ್ಯಾಪಕ ವಿದ್ಯಾರ್ಥಿಯು ಶಿಬಿರವನ್ನು ಯಶಸ್ವಿಯಾಗಿ ಮುಗಿಸಿದ್ದಾನೆ ಎಂದು ಪರಿಗಣಿಸಲಾಗುವುದು.

### 8.5.18 ಶೈಕ್ಷಣಿಕ ಪ್ರವಾಸ

ಕಲಿಕೆಯು ಕಾರ್ಯಕ್ಷಮತೆಯಿಂದ ಮುಂದುವರಿಯುವುದರ ಒಂದು ಪ್ರಧಾನ ಉಪಾದಿಯಾಗಿ ಶೈಕ್ಷಣಿಕ ಪ್ರವಾಸವನ್ನು ಪರಿಗಣಿಸಲಾಗುವುದು. ಇದನ್ನು ಒಂದು ವಿನೋದ ಯಾತ್ರೆಯಾಗಿ ಕಾಣಬಾರದು. ನಿರ್ದಿಷ್ಟ ವಿಷಯವೊಂದರ ಸರಿಯಾದ ನಿರ್ವಹಣೆಗೆ ಅತ್ಯಂತ ಹೆಚ್ಚು ಪ್ರೋತ್ಸಾಹವನ್ನು ನೀಡುವ ಸ್ಥಳವನ್ನು ನಾವು ಪ್ರವಾಸಕ್ಕಾಗಿ ಆಯ್ಕೆ ಮಾಡಬೇಕು. ಇಂತಹ ಪ್ರದೇಶಗಳನ್ನು ಆಯ್ಕೆ ಮಾಡಿ, ಸಂದರ್ಶನದ ಮೂಲಕ ಶೈಕ್ಷಣಿಕ ಯಾತ್ರೆಯನ್ನು ಮುಗಿಸಿದ ನಂತರದಲ್ಲಿ ಈ ಪ್ರವಾಸದ ಮೂಲಕ ಪಡೆದ ಧಾರಣೆಗಳು, ಸಾಮರ್ಥ್ಯಗಳನ್ನು ಚರ್ಚಿಸಬೇಕು. ಮಾತ್ರವಲ್ಲದೆ ಅಕಾಡಮಿಕ್ ಆಗಿ ಗಳಿಸಿದಂತಹ ಹಿರಿಮೆಗಳನ್ನು ಆಧರಿಸಿ ಪ್ರವಾಸ ವರದಿಯನ್ನು ತಯಾರಿಸಬೇಕು.

ಬಯಲು ಪ್ರವಾಸ ಎಂಬ ರೀತಿಯಲ್ಲಿಯೂ ಇದನ್ನು ನಿರ್ವಹಿಸಬಹುದಾಗಿದೆ. ಒಂದರಿಂದ ಮೂರುದಿನಗಳ ವರೆಗಿನ ಪ್ರವಾಸವನ್ನು ಸಂಘಟಿಸಬಹುದಾಗಿದೆ. ಶಾಲಾ ಪ್ರವಾಸದ ಯೋಜನೆಯನ್ನು ತಯಾರಿಸಲು ಅಧ್ಯಾಪಕ ವಿದ್ಯಾರ್ಥಿಗಳಿಗೆ ಸಂದರ್ಭವನ್ನೊದಗಿಸಬೇಕು. ಅಧ್ಯಾಪಕರೆಂಬ ನೆಲೆಯಲ್ಲಿ ತನ್ನ ಅಭಿವೃದ್ಧಿಗೆ, ಅನುಭವಕ್ಕೆ ಪೂರಕವಾಗುವ ರೀತಿಯ ಸಂಸ್ಥೆ/ ಸ್ಥಳಗಳನ್ನು ನಾವು ಇದಕ್ಕಾಗಿ ಆಯ್ಕೆ ಮಾಡಬೇಕು.

ಉದಾ :

- ವಿಶೇಷ ಪರಿಗಣನೆ ಅಗತ್ಯವಿರುವ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಸಂಸ್ಥೆಗಳು.
- ವಿಜ್ಞಾನ ಮತ್ತು ತಾಂತ್ರಿಕ ಮ್ಯೂಸಿಯಂ, ಮೃಗಾಲಯ, ಪ್ಲಾನಟೋರಿಯಂ, ಎಕ್ಸಿಬಿಷನ್ ಮುಂತಾದವು.
- ರಾಜ್ಯ/ಜಿಲ್ಲಾಮಟ್ಟದ ವಿಜ್ಞಾನ/ಗಣಿತ/ವೃತ್ತಿ ಪರಿಚಯ ಮೇಳಗಳು
- ರಾಜ್ಯ/ಜಿಲ್ಲಾ ಮಟ್ಟದ ಕ್ರೀಡೋತ್ಸವ
- ಚಾರಿತ್ರಿಕ ಪ್ರಾಧಾನ್ಯತೆಯಿರುವ ಸ್ಥಳಗಳು.
- ಕೈಗಾರಿಕೆಗಳು/ಸಂಸ್ಕರಣಾ ಸಂಸ್ಥೆಗಳು ಇತ್ಯಾದಿ.

ಸಂದರ್ಶಿಸಬೇಕಾದ ಸ್ಥಳ/ಸಂಸ್ಥೆಗಳ ಕುರಿತಾಗಿ ಚರ್ಚೆಯನ್ನು ನಡೆಸಬೇಕು. ಯಾವೆಲ್ಲ ವಿವರಣೆಗಳನ್ನು ಶೇಖರಿಸಬೇಕು? ಶೈಕ್ಷಣಿಕವಾದ ಯಾವೆಲ್ಲ ಹಿರಿಮೆ/ ಮಾಹಿತಿಗಳು ಸಿಗಬಹುದು? ಕಿರುಟಿಪ್ಪಣಿಯ ತಯಾರಿ, ಚರ್ಚೆ, ಶೈಕ್ಷಣಿಕ ಪ್ರವಾಸದ ಮೂಲಕ ಪಡೆಯುವ ಸಹಕಾರ

ಮನೋಭಾವ ಮಾಡಬೇಕಾದ ತಯಾರಿಗಳು ಇತ್ಯಾದಿಗಳನ್ನು ಮೊದಲೇ ಚರ್ಚೆ ಮಾಡಬೇಕು. ಶೈಕ್ಷಣಿಕ ಪ್ರವಾಸದಲ್ಲಿ ಪ್ರತಿಯೋರ್ವರ ಭಾಗವಹಿಸುವಿಕೆ ಕಡ್ಡಾಯವಾಗಿದೆ.

ಶೈಕ್ಷಣಿಕ ಪ್ರವಾಸಕ್ಕೆ 10 ಅಂಕಗಳನ್ನು ನಿಶ್ಚೈಸಲಾಗಿದೆ. ಇದನ್ನು ನಾಲ್ಕನೇ ಸೆಮಿಸ್ಟರ್‌ನ ಇಂಟರ್ನ್‌ಶಿಪ್‌ನ ಭಾಗವಾಗಿ ಕೊಡಲಾಗುವುದು. ಶೈಕ್ಷಣಿಕ ಪ್ರವಾಸದಲ್ಲಿ ಕನಿಷ್ಠ $C^+$ ಗ್ರೇಡ್ (50 – 59% ಅಂಕಗಳು) ನ್ನು ಅಧ್ಯಾಪಕ ವಿದ್ಯಾರ್ಥಿ ಗಳಿಸಬೇಕು.

**8.5.19 ನಾಲ್ಕನೇ ಸೆಮಿಸ್ಟರ್ ($S_4$) ಇಂಟರ್ನ್‌ಶಿಪ್ ಅಂಕಗಳ ಕ್ರೋಡೀಕರಣ**

**ಫೋರ್ಮೇಟ್ ($F_3$) ಇಂಟರ್ನ್‌ಶಿಪ್ ಕ್ರೋಡೀಕರಣ – ನಾಲ್ಕನೇ ಸೆಮಿಸ್ಟರ್**

**8.5.20 ಇಂಟರ್ನ್‌ಶಿಪ್‌ನ ಮೌಲ್ಯಮಾಪನ**

ನಾಲ್ಕನೆಯ ಸೆಮಿಸ್ಟರ್‌ನಲ್ಲಿ ($S_4$) ಇಂಟರ್ನ್‌ಶಿಪ್‌ಗೆ ಒಟ್ಟು $C^+$ ಗ್ರೇಡ್ (50 – 59% ) ಅಂಕಗಳನ್ನಾದರೂ ಅಧ್ಯಾಪಕ ವಿದ್ಯಾರ್ಥಿಗಳಿಸಬೇಕು. ಅದರೊಂದಿಗೆ ಸಮೂಹ ಸಂಪರ್ಕ ಸಹವಾಸ ಶಿಬಿರದಲ್ಲಿ ಕನಿಷ್ಠ $C^+$ ಗ್ರೇಡ್ (50 – 59%) ಶೈಕ್ಷಣಿಕ ಪ್ರವಾಸಕ್ಕೆ $C^+$ ಗ್ರೇಡ್ (50 – 59 ಅಂಕಗಳು) ಪಡೆಯಬೇಕು. ಈ ಮೂರನ್ನು ಅನುಸರಿಸಿದ ಗ್ರೇಡ್‌ಗಳನ್ನು ಪಡೆದರೆ ಮಾತ್ರವೇ ಕಲಿಕಾರ್ಥಿ ನಾಲ್ಕನೇ ಸೆಮಿಸ್ಟರನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದನೆಂದು ಘೋಷಿಸಲಾಗುವುದು. ಅಂಕಗಳನ್ನು ಕ್ರೋಡೀಕರಿಸುವುದಕ್ಕೆ $F_3$ ಫೋರ್ಮ್‌ನ್ನು ಬಳಸಬೇಕು.

| ಕ್ರಮ ಸಂಖ್ಯೆ | ಮಗುವಿನ ಹೆಸರು | ವಿಷಯ | | | | | | | | | | | | ಒಟ್ಟು | ಗ್ರೇಡ್ | ಷರಾ |
|---|---|---|---|---|---|---|---|---|---|---|---|---|---|---|---|---|
| | | ಕನ್ನಡ | ಇಂಗ್ಲೀಷ್ | ಐಚ್ಛಿಕ ವಿಷಯಗಳು SS/SC/Maths | ಪರಿಸರ ವಿಜ್ಞಾನ | ಗಣಿತ | ಕಲಾ ಶಿಕ್ಷಣ | ವೃತ್ತಿ ಪರಿಚಯ ಶಿಕ್ಷಣ | ಆರೋಗ್ಯ ಮತ್ತು ದೈಹಿಕ ಶಿಕ್ಷಣ | ಸಹವಾಸ ಶಿಬಿರ | | ಶೈಕ್ಷಣಿಕ ಪ್ರವಾಸ | | | | |
| | | | | | | | | | | ಅಂಕ | ಗ್ರೇಡ್ | ಅಂಕ | ಗ್ರೇಡ್ | | | |
| | ಗರಿಷ್ಟ ಅಂಕಗಳು → | (30) | (30) | (60) | (10) | (10) | (10) | (10) | (10) | (20) | | (10) | | (200) | | |
| 1 | | | | | | | | | | | | | | | | |
| 2 | | | | | | | | | | | | | | | | |
| 3 | | | | | | | | | | | | | | | | |
| 4 | | | | | | | | | | | | | | | | |
| 5 | | | | | | | | | | | | | | | | |

ಸ್ಥಳ :
ದಿನಾಂಕ :

ಸಹಿ:
ಪ್ರಾಂಶುಪಾಲರ ಹೆಸರು:
ವಿಳಾಸ:

ಶಾಲಾ ಮುದ್ರೆ

**8.6 ಇಂಟರ್ನ್‌ಶಿಪ್‌ಗೆ ಸಂಬಂಧಿಸಿದ ಪ್ರತ್ಯೇಕ ನಿರ್ದೇಶನಗಳು :**

1. ಪ್ರಾಕ್ಟೀಸ್ ಟೀಚಿಂಗಿನ ವೇಳೆಯಲ್ಲಿ ಪ್ರತಿಯೊಂದು ದಿನದ ಕಲಿಕಾ ಅನುಭವಗಳನ್ನು ಅಧ್ಯಾಪಕ ವಿದ್ಯಾರ್ಥಿಗಳು ಗುಂಪಾಗಿ ಕುಳಿತು ಮೌಲ್ಯಮಾಪನ ಮಾಡಬೇಕು. ತರಗತಿಯ ಸಮಯವು ಮುಗಿದ ನಂತರದಲ್ಲಿ ಜತೆಯಲ್ಲಿ ಕುಳಿತುಕೊಂಡು ಚರ್ಚೆ ನಡೆಸಬೇಕು ಮತ್ತು ಚರ್ಚೆಯ ವಿವರಣೆಗಳನ್ನು ಮಿನಿಟ್ಸ್ ಪುಸ್ತಕದಲ್ಲಿ ದಾಖಲಿಸಿ ತೆಗೆದಿರಿಸಬೇಕು. ಇದನ್ನು ಸ್ಕೂಲ್ ರಿಸೋರ್ಸ್ ಗ್ರೂಪ್ (ಎಸ್. ಆರ್.ಜಿ.) ಗೆ ಪ್ರಾಯೋಗಿಕ ಚಟುವಟಿಕೆಯಾಗಿ ಪರಿಗಣಿಸಬಹುದು. ಇದಕ್ಕಿರುವ ನಿರ್ದೇಶನಗಳನ್ನು ಟೀಚರ್ ಎಜ್ಯುಕೇಟರ್ ನೀಡಬೇಕು. ಗುಂಪು ಯೋಜನೆಯ ಅಗತ್ಯವನ್ನು ತಿಳಿಸಬೇಕು. ಶಾಲಾ ಮಟ್ಟದಲ್ಲಿ ಎಸ್.ಆರ್.ಜಿ, ಕ್ಲಾಸ್ ಪಿ.ಟಿ.ಎ., ಎಸ್.ಎಸ್.ಜಿ. ಇತ್ಯಾದಿಗಳಲ್ಲಿ ಅಧ್ಯಾಪಕ ವಿದ್ಯಾರ್ಥಿ ಭಾಗವಹಿಸುವಂತೆ ನಿರ್ದೇಶನಗಳನ್ನು ನೀಡಬೇಕು.
2. ಶಾಲಾ ಇಂಟರ್ನ್‌ಶಿಪ್‌ನ ಭಾಗವಾಗಿ ತರಗತಿಗಳು ಸರಿಯಾದ ರೀತಿಯಲ್ಲಿ ಯೋಜನಾ ಬದ್ಧವಾಗಿ ನಡೆಯುತ್ತಿದೆಯೆಂದೂ, ವಿಮರ್ಶಣಾತ್ಮಕ ತರಗತಿಗಳು ನಿರ್ದೇಶಿತ ರೀತಿಯಲ್ಲಿ ನಡೆಯುವುದೇ ಎಂದು ಆಯಾ ವಿಷಯಗಳ ಜವಾಬ್ದಾರಿಯನ್ನು ಹೊಂದಿದ ಟೀಚರ್ ಎಜ್ಯುಕೇಟರ್ ಖಾತರಿಪಡಿಸಿಕೊಳ್ಳಬೇಕು. ಸಂದರ್ಶನದ ಸಮಯದಲ್ಲಿ ಅಧ್ಯಾಪಕ ವಿದ್ಯಾರ್ಥಿಯು ನಿರೀಕ್ಷಣೆಯನ್ನು ಮಾಡುವ ತರಗತಿಯ ಕುರಿತಾದ ಮಾಹಿತಿ ಯೋಜನಾ ದಾಖಲೆಯಲ್ಲಿ ದಾಖಲಿಸಲಾಗಿದೆ ಎಂದು ಷರಾ ಬರೆದು ಸಹಿಯನ್ನು ಮಾಡಬೇಕು. ಪ್ರತೀ ಆಯ್ಕೆ ಮಾಡಿದ ಶಾಲೆಗೆ ದಿನದಲ್ಲಿ ಒಬ್ಬ ಟೀಚರ್ ಎಜ್ಯುಕೇಟರ್ ಆದರೂ ಸಂದರ್ಶನ ನೀಡುವಂತೆ ಸಂದರ್ಶನದ ವೇಳಾಪಟ್ಟಿಯನ್ನು ಕ್ರಮೀಕರಿಸಬೇಕು. ಇದನ್ನು ಐ.ಟಿ.ಇ ಮಟ್ಟದಲ್ಲಿ ಚರ್ಚಿಸಿ ತಯಾರಿಸಬೇಕು.
3. ಟೀಚಿಂಗ್ ಪ್ರಾಕ್ಟೀಸ್‌ನ ಸಂದರ್ಭದಲ್ಲಿ ಶಾಲಾ ಅಸೆಂಬ್ಲಿಯು ಫಲಪ್ರದವಾಗಿ ಯೋಜಿಸಲ್ಪಡುತ್ತಿದೆಯೇ ಎಂಬ ಪ್ರಾಯೋಗಿಕ ತರಬೇತಿ, ಎಸ್.ಇ.ಎನ್ ವಿದ್ಯಾರ್ಥಿಗಳಿಗೆ ಅಕಾಡಮಿಕ್ ಸಹಾಯವನ್ನು ನೀಡುವುದಕ್ಕೆಸಂಬಂಧಿಸಿದ ತರಬೇತಿ, ಕ್ರಿಯಾತ್ಮಕ ಮತ್ತು ಸಂಶೋಧನಾತ್ಮಕ ಪ್ರಯೋಗ ಚಟುವಟಿಕೆಗಳು, ಅಗತ್ಯವಿರುವ ಮಕ್ಕಳಿಗೆ ಕೊಡಬೇಕಾದ ಕೌನ್ಸಿಲಿಂಗ್ ಮತ್ತು ಗೈಡೆನ್ಸ್ ಮುಂತಾದವುಗಳ ಕುರಿತಾದ ಯೋಗ್ಯ ತರಬೇತಿಯನ್ನು ನೀಡಬೇಕು. ಮೆಂಟರ್ ಆಗಿ ಕಾರ್ಯನಿರ್ವಹಿಸುವ ಅಧ್ಯಾಪಕರಿಂದ ಸೂಕ್ತವಾದ ಮಾರ್ಗನಿರ್ದೇಶನಗಳನ್ನು ಸ್ವೀಕರಿಸಿ ಚಟುವಟಿಕೆಗಳನ್ನು ಸುಸೂತ್ರವಾಗಿ ನಿರ್ವಹಿಸಲು ಅಗತ್ಯವಾದ ಶಾಲಾ ವಾತಾವರಣವನ್ನು ಉಂಟುಮಾಡುವುದು ಅತ್ಯಂತ ಅಪೇಕ್ಷಣೀಯವಾಗಿದೆ.
4. ಅಧ್ಯಾಪಕ ತರಬೇತಿಯನ್ನು ಪೂರ್ತಿಗೊಳಿಸಿದಾಗ ಸಂಬಂಧಿಸಿದ ಶಾಲೆಯು ವರದಿಯೊಂದನ್ನು ತಯಾರಿಸಿ ಅಧ್ಯಾಪಕ ತರಬೇತಿ ಸಂಸ್ಥೆಗೆ ನೀಡಬೇಕು. ಇದಕ್ಕಾಗಿ ಪ್ರತ್ಯೇಕ ಪ್ರೋಫೋರ್ಮ ತಯಾರಿಸಿ ವಿದ್ಯಾಲಯಕ್ಕೆ ನೀಡಬೇಕು. ಪ್ರೋಫೋರ್ಮ ಮಾದರಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಅಧ್ಯಾಪಕ ವಿದ್ಯಾರ್ಥಿಯ ಹಾಜರನ್ನು ಹಾಕುವ ಪುಸ್ತಕವನ್ನು ವರದಿಯೊಂದಿಗೆ ಸಮರ್ಪಿಸಬೇಕು.

   ಪ್ರತಿಯೊಬ್ಬ ಅಧ್ಯಾಪಕ ವಿದ್ಯಾರ್ಥಿಯ ಕಲಿಕಾ ಚಟುವಟಿಕೆಗೆ ಸಂಬಂಧಿಸಿ ಮೆಂಟರ್ ನೀಡುವ ಮೌಲ್ಯಮಾಪನ ವರದಿಯನ್ನು ಕೂಡ ಶಾಲಾ ಅಧಿಕೃತರು ಈ ವರದಿಯೊಂದಿಗೆ ಸಮರ್ಪಿಸಬೇಕು. ಇದಕ್ಕಿರುವ ಫೋರ್ಮೇಟನ್ನು ಸಹ ಅನುಬಂಧದಲ್ಲಿ ನೀಡಲಾಗಿದೆ. ಅಧ್ಯಾಪಕ ತರಬೇತಿಯ ಸಂದರ್ಭದಲ್ಲಿ ಶನಿವಾರಗಳಂದು ಐ.ಟಿ.ಇ ಯಲ್ಲಿ ಅಧ್ಯಾಪಕ ವಿದ್ಯಾರ್ಥಿಗಳನ್ನು ಕರೆದು ಚರ್ಚೆಯನ್ನು ನಡೆಸಬೇಕು. ಟೀಚಿಂಗ್ ಪ್ರಾಕ್ಟೀಸ್‌ನ ಸಂದರ್ಭದಲ್ಲಿ ಉಂಟಾಗುವ ಪ್ರಾಯೋಗಿಕ ಸಮಸ್ಯೆಗಳಿಗೆ, ಶಾಲಾ ಅಧಿಕೃತರ ಮನೋಭಾವ, ಹಿರಿಮೆಗಳು ಇತ್ಯಾದಿಗಳ ಕುರಿತು ಚರ್ಚೆ ನಡೆಸಬೇಕು. ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯವಾದ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು. ಡಯಟ್, ಎ.ಇ.ಒ. ಮುಂತಾದವರ ಸಲಹೆ ಸಹಕಾರಗಳನ್ನು ಈ ನಿಟ್ಟಿನಲ್ಲಿ ಪಡೆದುಕೊಳ್ಳಬೇಕು.